<u>ಸಿಸಿ ನಂ. 201/2018</u> <u>ಪಿಡಬ್ಲೂ :1</u>

<u>ದಿನಾಂಕಃ 22-3-2022 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು.</u>

**<u>ಮುಖ್ಯ ವಿಚಾರಣೆಃ ಶ್ರೀ ವಿ ಪಿ ಟಿ ವಕೀಲರಿಂದಃ ಪಿರ್ಯಾದುದಾರರ ಪರವಾಗಿಃ</u>**

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ನ್ಯಾಯಾಲಯಕ್ಕೆ ಸಲ್ಲಿಸಿದ್ದು, ಅದರಲ್ಲಿರುವ ವಿಷಯಗಳನ್ನು ನಾನು ಹೇಳಿ ಬರೆಸಿದ್ದು ಅದನ್ನು ಓದಿ ತಿಳಿದುಕೊಂಡು ನನ್ನ ಸಹಿಯನ್ನು ಮಾಡಿರುತ್ತೇನೆ.

ಫಿರ್ಯಾದಿ ಸಂಸ್ಥೆಯವರು ನೀಡಿದ ಜಿಪಿಎದ ದೃಢೀಕೃತ ಪ್ರತಿಯನ್ನು ಹಾಜರು ಪಡಿಸಿದ್ದು ಅದನ್ನು ನಿಪಿ-1 ಎಂದು, ಆರೋಪಿ ನೀಡಿದ ಅಸಲು ಚೆಕ್ ಹಾಜರು ಪಡಿಸಿದ್ದು ಅದನ್ನು ನಿಪಿ-2 ಎಂದು, ಆರೋಪಿಯ ಸಹಿಯನ್ನು ಆರೋಪಿ ಪರ ವಕೀಲರ ಆಕ್ಷೇಪಣೆಗೆ ಒಳಪಟ್ಟು ನಿಪಿ-2 ಎ ಎಂದು, ಬ್ಯಾಂಕನವರು ಕೊಟ್ಟ ಹಿಂಬರಹವನ್ನು ಹಾಜರು ಪಡಿಸಿದ್ದು ಅದನ್ನು ನಿಪಿ -3 ಎಂದು, ವಕೀಲರ ಮುಖಾಂತರ ಆರೋಪಿಗೆ ನೀಡಿದ ನೋಟಿಸಿನ ಕಚೇರಿ ಪ್ರತಿಯನ್ನು ಹಾಜರು ಪಡಿಸಿದ್ದು ಅದನ್ನು ನಿಪಿ-4 ಎಂದು, ಅಂಚೆ ರಸೀದಿಯನ್ನು ಹಾಜರು ಪಡಿಸಿದ್ದು ಅದನ್ನು ನಿಪಿ-5 ಎಂದು, ಅಂಚೆ ಸ್ವೀಕೃತಿ ಪತ್ರವನ್ನು ಹಾಜರು ಪಡಿಸಿದ್ದು ಅದನ್ನು ನಿಪಿ-6 ಎಂದು, ಅಂಚೆ ಸ್ವೀಕೃತಿ ಪತ್ರದಲ್ಲಿರುವ ಆರೋಪಿಯ ಸಹಿಯನ್ನು ಆರೋಪಿ ಪರ ವಕೀಲರ ಆಕ್ಷೇಪಣೆಗೆ ಒಳಪಟ್ಟು ಅದನ್ನು ನಿಪಿ-6 ಎ ಎಂದು, ಲೋನ್ ಕಮ್ ಹೈಪೋಥಿಕೇಶನ ಕರಾರನ್ನು ನಿಪಿ-7 ಎಂದು, ಎರಡು ಅರಿಯರ್ಸ ನೋಟಿಸನ್ನು ಅನುಕ್ರಮವಾಗಿ ನಿಪಿ -8 ಮತ್ತು 9 ಎಂದು, ಎರಡು ಅಂಚೆ ಸ್ವೀಕೃತಿಗಳನ್ನು ನಿಪಿ-10 ಮತ್ತು 11 ಎಂದು, ದಿಃ 4-8-2012 ರಂದು ವಕೀಲರ ಮುಖಾಂತರ ಆರೋಪಿ ಮತ್ತು ಆರೋಪಿಯ ಜಾಮೀನುದಾರರಿಗೆ ನೀಡಿದ ನೋಟಿಸಿನ ಕಚೇರಿ ಪ್ರತಿಯನ್ನು ಹಾಜರು ಪಡಿಸಿದ್ದು ಅದನ್ನು ನಿಪಿ -12 ಎಂದು, ಮರಳಿ ಬಂದ ಎರಡು ಅಂಚೆ ಲಕೋಟೆಗಳನ್ನು ಅನುಕ್ರಮವಾಗಿ ನಿಪಿ-13 ಮತ್ತು 14 ಎಂದು, ನಿಪಿ-13 ಮತ್ತು 14 ನ್ನು ಬಹಿರಂಗ ನ್ಯಾಯಾಲಯದಲ್ಲಿ ತೆರೆದು ನೋಡಲಾಗಿ ಅದರಲ್ಲಿರುವ ನೋಟಿಸಿನ ಪ್ರತಿಗಳನ್ನು ಅನುಕ್ರಮವಾಗಿ ನಿಪಿ-13 ಎ ಮತ್ತು 14 ಎ ಎಂದು, ಸ್ಟೇಟ್ ಮೆಂಟ್ ಆಪ್ ಅಕೌಂಟ್ ನ್ನು ನಿಪಿ-15 ಎಂದು ಗುರುತಿಸಲಾಯಿತು.

ಆದ್ದರಿಂದ ಆರೋಪಿಯ ವಿರುದ್ಧ ಸೂಕ್ತ ಕ್ರಮ ಜರುಗಿಸಲು ಆದೇಶವಾಗಲು ಪ್ರಾರ್ಥನೆ.

**<u>ಪಾಟೀ ಸವಾಲುಃ ಶ್ರೀ ಎಸ್ ಜೆ ಎನ್ ವಕೀಲರಿಂದಃ ಆರೋಪಿ ಪರಃ</u>**

( ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ನೀಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.